# ಬಿ.ಪಿ.ಪಿ.ಎ.ಎಲ್.ಪಿ.ಶಾಲೆ ಪೆರ್ಮುದೆ

ಅಂಚೆ :ಪೆರ್ಮುದೆ   ವಯ : ಮಂಗಲ್ಪಾಡಿ   ಜಿಲ್ಲೆ : ಕಾಸರಗೋಡು   ಪಿನ್: 671342

Email.bppalpspermude@gmail.com

# ಹಿರಿಮೆಗೊಂದು ಹೆಜ್ಜೆ

# ಶಾಲಾ ಶೈಕ್ಷಣಿಕ ಯೋಜನೆ

## Academic Master Plan 2025-2026

ವಿದ್ಯಾಭ್ಯಾಸ ಜಿಲ್ಲೆ : ಕಾಸರಗೋಡು

ಉಪಜಿಲ್ಲೆ : ಮಂಜೇಶ್ವರ

ಪಂಚಾಯತು : ಪೈವಳಿಕೆ

# ಶಾಲಾ ವಿವರಗಳು

| | |
|---|---|
| School code | 11232 |
| Name of school | B.P.P.A.L.P.SCHOOL PERMUDE |
| Name of district | Kasaragod |
| Name of Sub district | Manjeshwar |
| Name of AEO office | AEO office Manjeshwara Uppala |
| Name of BRC | BRC Manjeshwar |
| Name of CRC | GWLPS Heroor |
| Name of Block Panchayath | Manjeshwar |
| Name of Panchayath | Paivalike |
| Name of Ward | Permude |
| Name of Legislative Assembly | Manjeshwar |
| Name of manager | E.Ravishankara Bhat |
| Name of Headmaster | Sadashiva .K.K |
| Contact number | 9895593334 |
| Name of SRG convenor | Swathi.B |
| Number of Permanent staff | 05 |
| Email | bppalpspermude@gmail.com |
| Blog | 11232bppalpspermude.blogspot.com |
| School wiki | schoolwiki.in ബി_പി_പി_എ_എൽ_പി_എസ്_ പെർമുഡെ(ಬಿ.ಪಿ.ಪಿ.ಎ.ಎಲ್.ಪಿ.ಎಸ್_ಪೆರ್ಮುದೆ_) |

# ಮುನ್ನುಡಿ

1895 ನೇ ಇಸವಿಯಲ್ಲಿ ಅಂದಿನ ಮದರಾಸು ಸರಕಾರದಿಂದ ಮಾನ್ಯ ತೆ ಪಡೆದ ನಮ್ಮ ಶಾಲೆಯು ಬಾಡೂರು ಪ್ರಾಥಮಿಕ ಶಾಲೆ ಎಂಬ ಹೆಸರಿನಲ್ಲಿ ಬಾಡೂರು ಗ್ರಾಮದ ಕಟ್ಟದ ಕಾಡು ಎಂಬಲ್ಲಿ ಸ್ಥಾಪನೆಗೊಂಡಿದ್ದು ಕಳೆದ 130 ವರ್ಷಗಳಿಂದ ಈ ಪ್ರದೇಶದ ವಿದ್ಯಾಭ್ಯಾಸ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿ ಮಹತ್ತರವಾದ ಕೊಡುಗೆ ನೀಡುತ್ತಾ, ತನ್ನ ಶತಮಾನೋತ್ರರ ಬೆಳ್ಳಿಹಬ್ಬದ ಕಡೆಗೆ ಹೆಜ್ಜೆಹಾಕುತ್ತಿದೆ . 1953 ರಲ್ಲಿ ಬೆಂಕಿ ಆಕಸ್ಮಿಕಕ್ಕೆ ಗುರಿಯಾಗಿ ತನ್ನ ಎಲ್ಲಾ ದಾಖಲೆಗಳನ್ನು ಕಳೆದುಕೊಂಡ ಶಾಲೆಯು, 1954 ರಲ್ಲಿ ಈ ಶಾಲೆಯು ಪ್ರಕೃತಿ ರಮಣೀಯವಾದ ಪೆರ್ಮುದೆಗೆ ವರ್ಗಾಯಿಸಲ್ಪಡುವಾಗ ಬಾಡೂರು ಪೆರ್ಮುದೆ ಪರಮೇಶ್ವರಿ ಅನುದಾನಿತ ಕಿರಿಯ ಪ್ರಾಥಮಿಕ ಶಾಲೆ ಎಂದು ಪುರ್ನನಾಮಕರಣಗೊಂಡಿತು.ಪ್ರಾ ಥಮಿಕ ಹಂತದಲ್ಲಿ ಮೊದಲು ಇಲ್ಲಿ 1 ರಿಂದ 5 ರ ವರೆಗೆ ತರಗತಿಗಳಿಗೆ ಸರಕಾರದಿಂದ ಮಾನ್ಯತೆ ಲಭಿಸಿದ್ದ ರೂ ಪ್ರಸ್ತುತ 1 ರಿಂದ 4 ರ ವರೆಗೆ ತರಗತಿಗಳು ನಡೆಯುತ್ತಿದೆ. ಮೊದಲು ಶನ್ನಿಕೋಡಿ ಮನೆತನದವರು ಈ ಶಾಲೆಯ ಪ್ರಬಂಧಕರಾಗಿದ್ದು ಪ್ರಸ್ತುತ ಎಡಕ್ಕಾನ ರವಿಶಂಕರ ಭಟ್ ರವರ ಪ್ರಬಂಧಕತ್ವದಲ್ಲಿ ಮಂಜೇಶ್ವರ ಉಪಜಿಲ್ಲೆಯ ಅತ್ಯುತ್ತಮ ಎಲ್.ಪಿ ಶಾಲೆಗಳಲ್ಲಿ ಒಂದಾಗಿ ದಿಟ್ಟ ಹೆಜ್ಜೆಯಿಡುತ್ತಿದೆ.

ನಮ್ಮ ಶಾಲೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಈಗ ದೇಶ ವಿದೇಶಗಳಲ್ಲಿ ಉತ್ತಮ ಉದ್ಯೋಗದಲ್ಲಿದ್ದು ಶಾಲೆಯ ಶೈಕ್ಷಣಿಕ ಹಾಗೂ ಭೌತಿಕ ಅಭಿವೃದ್ದಿಗಾಗಿ ಇವರ ಸಹಭಾಗಿತ್ವ ವನ್ನು ಖಾತರಿ ಪಡಿಸಿಕೊಂಡು ಶಾಲಾಭಿವೃದ್ಧಿ ಯೋಜನೆಗೆ ರೂಪು ನೀಡಲಾಗಿದೆ. ಸಮೀಪದ ಎಡಕ್ಕಾನ, ಪೆರಿಯಡ್ಕ, ಕುಂಡೇರಿ, ನೆಕ್ಕರೆಕಾಡು, ಅಮ್ಮಾಲ್, ಕಂಬಾರು ಮೊದಲಾದ ಸ್ಥಳಗಳಿಂದ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಇಲ್ಲಿಗೆ ಬರುತ್ತಿದ್ದಾರೆ. ಶಾಲೆಯ ಎಲ್ಲಾ ಕಾರ್ಯಕ್ರಮಗಳಿಗೂ ಪಿ.ಟಿ.ಎ, ಯಂ.ಪಿ.ಟಿ.ಎ, ಯಸ್.ಯಸ್.ಜಿ, ಹಾಗೂ ಸಂಘ-ಸಂಸ್ಥೆಗಳು ನೀಡುತ್ತಿರುವ ಸಹಕಾರಗಳು ಶಾಲೆಯ ಶೈಕ್ಷಣಿಕ ಹಾಗೂ ಭೌತಿಕ ಬೆಳವಣಿಗೆಗೆ ಸಹಕಾರಿಯಾಗುತ್ತಿದೆ. ಭೌತಿಕವಾಗಿ ಶಾಲೆಗೆ ಸುಮಾರು 40 ಲಕ್ಷ ರೂಪಾಯಿ ಖರ್ಚಿನಲ್ಲಿ ಹೊಸ ಕಟ್ಟಡ ನಿರ್ಮಿಸಲಾಗಿದ್ದು , ಶಾಲೆಯ ಸರ್ವತೋಮುಖ ಅಭಿವೃದ್ಧಿಯೂ, ಹಕ್ಕು ಆಧಾರಿತ ಶಿಕ್ಷಣಕ್ಕೂ ಈ ವರ್ಷಗಳ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಅಬಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗಿದ್ದು, ಅತ್ಯುತ್ತಮ ಸಮವಸ್ತ್ರ, ಕಾರ್ಯಕ್ಷಮವಾದ ಮಧ್ಯಾಹ್ನದ ಭೋಜನ ವ್ಯವಸ್ಥೆ,ಗುಣಮಟ್ಟದ ವಿದ್ಯಾಭ್ಯಾಸ, ಶೈಕ್ಷಣಿಕ ವರ್ಷಗಳಲ್ಲಿ ನಡೆಯುವ ವಿವಿಧ ಮೇಳಗಳಲ್ಲಿ, ಆಟೋಟಗಳಲ್ಲಿ ಕಲೋತ್ಸವ, ಉತ್ತಮ ಸಾಧನೆ, ಶಾಲಾ ವಾರ್ಷಿಕೋತ್ಸವ, ತರಬೇತಿ ಶಿಬಿರಗಳು, ಆರೋಗ್ಯ ತರಗತಿಗಳು, ಶಾಲೆಯ ಶೈಕ್ಷಣಿಕ ಅಭಿವೃದ್ಧಿಯ ಸಂಕೇತಗಳಾಗಿದೆ. ಶಾಲೆಯನ್ನು ಶೈಕ್ಷಣಿಕವಾಗಿ ಹಿರಿಮೆಯ ತಾಣವಾಗಿಸುವ 'ಹಿರಿಮೆಗೊಂದು ಹೆಜ್ಜೆ..ಶಾಲಾ ಶೈಕ್ಷಣಿಕ ಯೋಜನೆ(Academic Master Plan) 2025-26 ನಮ್ಮ ಶಾಲೆಯನ್ನು ಶೈಕ್ಷಣಿಕವಾಗಿ ರಾಜ್ಯ ಮಟ್ಟದಲ್ಲಿ ಗುರುತಿಸುವಂತೆ ಮಾಡಲು ನಮಗೊಂದು ದಾರಿ ದೀಪವಾಗಬಹುದೆಂದು ಆಶಿಸುತ್ತೇವೆ.




# ಶಾಲೆಯ ದೃಷ್ಠಿಕೋನ

*ಸಾರ್ವಜನಿಕ ಶಿಕ್ಷಣ ಸಂಸ್ಥೆಗಳು ಸಮಾಜದ ಕಣ್ಣು , ಶಾಲೆಯು ಮುಂದಿನ ತಲೆಮಾರು ಮತ್ತು ಸಮಾಜವು ಹೇಗಿರಬೇಕೆಂದು ನಿರ್ಧರಿಸುವ ಪ್ರಧಾನ ಘಟಕಗಳಲ್ಲಿ ಒಂದೆಂದರೂ ತಪ್ಪಾಗಲಾರದು. ನಮ್ಮ ಊರು ,ಇಲ್ಲಿಯ ಸಮಾಜ ,ಶೈಕ್ಷಣಿಕ, ಆರ್ಥಿಕ,ಬೌತಿಕ ಸ್ಥಿತಿಗತಿಗಳಿಗೆ ಹೊಂದಿಕೊಂಡು ಊರಿನ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸಬೇಕು.ಮುಂದಿನ ತಲೆಮಾರನ್ನು ಸೃಷ್ಠಿಸುವಲ್ಲಿ, ಶಾಲೆಯ ಸಂಪೂರ್ಣ ಬೌತಿಕ,ಶೈಕ್ಷಣಿಕ ಅಭಿವೃದ್ಧಿಯಲ್ಲಿ ನಮ್ಮ ಶಾಲೆಯು ದೇಶಿಯಮಟ್ಟದಲ್ಲಿ ಅತ್ಯುತ್ತಮ ಶಾಲೆಯಾಗಿ ಕಾರ್ಯನಿರ್ವಹಿಸಬೇಕೆಂಬ ದೃಷ್ಠಿಕೋನ ನಮ್ಮದು.*

*ನಮ್ಮ ಶಾಲಾಭಿವೃದ್ಧಿ ಯೋಜನೆಯಂತೆ 2020-21 ವರ್ಷದಲ್ಲಿ ಶಾಲೆಯು ಬೌತಿಕ ಸೌಕರ್ಯಗಳಲ್ಲಿ ಮಾದರಿ ಶಾಲೆಯಾಗಬೇಕು. ಶಾಲೆಗೆ ಆವರಣ ಗೋಡೆ, ಆಕರ್ಷಕ ಪ್ರವೇಶ ದ್ವಾರ , ಅಡುಗೆ ಕೋಣೆ ಮತ್ತು ಭೋಜನಶಾಲೆ,ವಿಶಾಲ ಆಟದ ಮೈದಾನ, ಜೈವಿಕ ಉದ್ಯಾನ , ಮಕ್ಕಳ ಪಾರ್ಕ್ ,ಬಯಲು ರಂಗಮಂದಿರ,ಪ್ರತ್ಯೇಕ ಐ.ಟಿ.ಲ್ಯಾಬ್, ಗ್ರಂಥಾಲಯ, ಸಭಾಭವನ, ಸಂಪೂರ್ಣ ಐಟೆಕ್ ತರಗತಿ ಕೋಣೆಗಳು,ಹೀಗೆ ಸುಮಾರು ೨ ಕೋಟಿ ರೂಪಾಯಿಗಳ ಅಭಿವೃದ್ಧಿ ಕಾಮಗಾರಿಕೆಗಳು ಇನ್ನು ನಡೆಯಬೇಕಿದೆ. ಶಾಲೆಯು ೧೨೩ ವರ್ಷಗಳಿಂದ ಕಿರಿಯ ಪ್ರಾಥಮಿಕ ಶಾಲೆಯಾಗಿ ಸೇವೆಸಲ್ಲಿಸುತ್ತಿದ್ದು ಹಿರಿಯ ಪ್ರಾಥಮಿಕ ಶಾಲೆಯಾಗಿ ಮೇಲ್ದರ್ಜೆಗೇರಬೇಕು.ವಿದ್ಯಾರ್ಥಿಗಳಿಗೆ ಅಂತರಾಷ್ಟ್ರೀಯ ಮಟ್ಟದ ಗುಣಮಟ್ಟದ ಶಿಕ್ಷಣ ನೀಡುವುದು, ಅವರು ದೈಹಿಕವಾಗಿ, ಮಾನಸಿಕವಾಗಿ, ಸಾಮಾಗಿಕ,ಸಾಂಸ್ಕೃತಿಕವಾಗಿ ಸದೃಡರಾಗಬೇಕು. ಊರ ಮಕ್ಕಳು ಊರ ಶಾಲೆಗೇ ದಾಖಲಾತಿಯನ್ನು ಪಡೆಯುದರೊಂದಿಗೆ ಶಾಲೆಯ ದಾಖಲಾತಿಯಲ್ಲಿ ಅಭೂತಪೂರ್ವ ಹೆಚ್ಚಳ ನಿರೀಕ್ಷಿಸುವುದು. ಎಲ್ಲಾ ಕ್ಷೇತ್ರಗಳಲ್ಲಿಯೂ "" ಹಿರಿಮೆಗೊಂದು ಹೆಜ್ಜೆಯಾಗಿದೆ "" ನಮ್ಮ ಶಾಲೆಯ ಬಗ್ಗೆ ನಮ್ಮ ದೃಷ್ಠಿಕೋನ.*



# ಸಾಮಾನ್ಯ ಉದ್ದೇಶಗಳು

1 ಪ್ರತಿಯೋಂದು ಮಗುವಿಗೂ ಗುಣಮಟ್ಟದ ಶಿಕ್ಷಣ ಖಾತರಿಪಡಿಸುವುದು ಮತ್ತು ಪಡೆಯಬೇಕಾದ ಕಲಿಕಾ ಸಾಧನಗಳನ್ನು ನೀಡುವುದು.

2 ಶಾಲೆಯನ್ನು ಶೈಕಣಿಕ ಹಿರಿಮೆಯ ತಾಣವಾಗಿ ಬದಲಾಯಿಸುವುದು. ಶಾಲೆ ಒಂದು ಟ್ಯಾಲೆಂಟ್ ಲ್ಯಾಬಾಗಿ ಕಾರ್ಯನಿರ್ವಹಿಸುವುದು.

3 ಕಲೆ, ಸಾಹಿತ್ಯ , ಸಂಗೀತ ಕ್ಷೇತ್ರಗಳಲ್ಲಿ ಮಕ್ಕಳನ್ನ ಪ್ರತಿಭಾವಂತರಾಗಿಸುವುದು. **ಮಾತೃ ಭಾಷಾ ಕಲಿಕೆಗೆ ಒತ್ತುನೀಡುವುದು.**

4 ವೃತ್ತಿ ಆಧರಿತ ಕಲಿಕೆಗೆ ಪ್ರೋತ್ಸಾಹ ನೀಡುವುದು ತರಭೇತಿ ನೀಡುವುದು

5 ಉತ್ತಮ ಇಂಗ್ಲೀಷ್ ಶಿಕ್ಷಣ , ಇಂಗ್ಲೀಷ್ ಓದಿ ಬರೆಯಲು ಮಾತನಾಡಲು ಸಾಕಷ್ಟು ಅವಕಾಶ ಸಂದರ್ಭಗಳು ನಮ್ಮ ತರಗತಿಗಳಲ್ಲಿ ನೀಡುವುದು.

6 ಮಗುವಿಗೆ ಆಸಕ್ತಿದಾಯಕ ತರಗತಿ ವಾತಾವರಣ ಸೃಷ್ಟಿಸಲು ಲಭ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಫಲಪ್ರದವಾಗಿ ಉಪಯೋಗಿಸಿಕೊಳ್ಳವುದು

7 ಮಕ್ಕಳಲ್ಲಿ ಓದಿನ ಅಬಿರುಚಿಯನ್ನು ಬೆಳೆಸಲು, ಮತ್ತು ಉತ್ತಮ ಓದುಗರನ್ನಾಗಿ ಬದಲಾಯಿಸುವುದು.

8 ಉತ್ತಮ ಆರೋಗ್ಯಕ್ಕೆ ವಿಷಮುಕ್ತ ತರಕಾರಿಗಳನ್ನು ಲಭ್ಯಗೋಳಿಸುವುದು . ಜೈವಿಕ ತರಕಾರಿ ತೋಟ ನಿರ್ಮಾಣ ಕೃಷಿ ಸಂಸ್ಕೃತಿಯ ಪರಿಚಯ

9 ಶಾಲೆಯ ಪ್ರತಿಯೊಂದು ತರಗತಿಗಳನ್ನು ಸ್ಮಾರ್ಟ್ ತರಗತಿಗಳಾಗಿಸುವುದು. ಮತ್ತು ಅಂತರಾಷ್ಟ್ರೀಯ ಗುಣಮಟ್ಟದ ಶಿಕ್ಷಣ ಲಭ್ಯಗೊಳಿಸುವುದು.

10 ಶಾಲೆಯನ್ನು ಪರಿಸರ ಸ್ನೇಹಿಯಾದ ಮತ್ತು ಹರಿತ ವಿದ್ಯಾಲಯವಾಗಿ ಬದಲಾಯಿಸುವುದು.ಮತ್ತು ಶಾಲೆ ಒಂದು ಪಾಠಪುಸ್ತಕವಾಗಿ ಬದಲಾಗುವುದು

11 ಮಕ್ಕಳ ಮಾನಸಿಕ ಹಾಗೂ ಶಾರೀರಿಕ ಆರೋಗ್ಯ ಉತ್ತಮಪಡಿಸುವುದು ಶಾಲೆ ಮತ್ತು ಪರಿಸರವನ್ನು ಮನೋಲ್ಲಾಸ ಕೇಂದ್ರವಾಗಿ ಬದಲಾಯಿಸುವುದು

12 **ಹರಿತ ನಿರ್ಮಲ ಶಾಲಾ ಪರಿಸರ ಖಾತರಿಪಡಿಸುವುದು. ಪರಿಸರ ಶುಚಿತ್ವ ಮತ್ತು ವ್ಯಕ್ತಿ ಶುಚಿತ್ವಕ್ಕೆ ಪ್ರಾಧಾನ್ಯತೆ ನೀಡುವುದು 13**



# ಕಾರ್ಯಕ್ರಮಗಳ ವಿವರ

| ಕ್ರ.ಸಂ | ಮಂಡಲಗಳು | ಚಟುವಟಿಕೆಗಳು |
|---|---|---|
| 1 | ಭಾಷೆ | ಓದುವ ಸಾಮಾಗ್ರಿಗಳು, ಅಕ್ಷರ ತೊಟ್ಟಿಲು,ಭಾಷಾ ಆಟಗಳು, ಕ್ಲಾಸ್ ಲೈಬ್ರೆರಿ, ಶಿಬಿರಗಳು |
| 2 | ಪರಿಸರ ಅಧ್ಯಯನ | ದಿನಾಚರಣೆಗಳು, ಲ್ಯಾಬ್ ಚಟುವಟಿಕೆಗಳು, ವಿಜ್ಞಾನ ಸಂಘ, ಸಯನ್ಸ್ ಲೈಬ್ರೆರಿ, ಜೈವಿಕ ಉದ್ಯಾನ, ಬಯಲುಪ್ರವಾಸಗಳು,ತರಕಾರಿ,ತೋಟ. |
| 3 | ಗಣಿತ | ಗಣಿತ ಲ್ಯಾಬ್, ಗಣಿತ ಆಟಗಳು, ಜಾಣ್ಮೆ ಲೆಕ್ಕ ,ಗಣಿತ ಮೇಳ, ಬುಲೆಟಿನ್ ಬೋರ್ಡ್, ಕಲಿಕೋಪಕರಣ. |
| 4 | ಇಂಗ್ಲೀಷ್ | ಲ್ಯಾಗ್ವೇಜ್ ಗೇಮ್ಸ್, ಇಂಗ್ಲೀಷ್ ಕ್ಯಾಂಪ್ , ಇಂಗ್ಲೀಷ್ ರೀಡಿಂಗ್ ಕಾರ್ಡ್, ಇಂಗ್ಲೀಷ್ ಲೈಬ್ರೆರಿ |
| 5 | ಪರಿಸರ ಶುಚಿತ್ವ ವ್ಯಕ್ತಿ ಶುಚಿತ್ವ | ಪ್ಲಾಸ್ಟಿಕ್ ಮುಕ್ತ ಶಾಲೆ, ಸ್ವಚ್ಚ ಸುಂದರ ಶಾಲೆ, ನಿರ್ಮಲ ವಿದ್ಯಾಲಯ |
| 6 | ಅರಬಿಕ್ | ಅರಬಿಕ್ ಪೆಸ್ಟ್ , ಅರಬಿಕ್ ಕ್ಲಬ್, ಹಸ್ತಪತ್ರಿಕೆ |
| 7 | ಕಲಾ ಶಿಕ್ಷಣ | ಬಾಲ ಸಭೆ, ಚಿತ್ರ ರಚನೆ , ನಾಟ್ಯ ತರಬೇತಿ, ಸಂಗೀತ, ನಾಟಕ, |
| 8 | ದೈಹಿಕ ,ಆರೋಗ್ಯ ಶಿಕ್ಷಣ | ಕ್ರೀಡಾ ಕೂಟ, ತರಬೇತಿಗಳು,ಯೋಗ, ವ್ಯಾಯಾಮ, ಆಟೋಟ ಕೋರ್ಟ್,ಆರೋಗ್ಯ ಮಾಹಿತಿ ಶಿಬಿರ, |
| 9 | ವೃತ್ತಿ ಪರಿಚಯ | ಕಸದಿಂದ ರಸ, ತರಬೇತಿ, ವೃತ್ತಿಪರಿಚಯ ಮೇಳ, ಪ್ರದರ್ಶನ , ಸಂಗ್ರಹಾಲಯ |
| 10 | ಐ.ಟಿ ಶಿಕ್ಷಣ | ಸ್ಲೈಡ್ ನಿರ್ಮಾಣ, ಡಿಜಿಟಲ್ ಟೆಸ್ಟ್ ತಯಾರಿ, ಐ.ಟಿ.ಲ್ಯಾಬ್, ಡಿಜಿಟಲ್ ತರಗತಿ |



# ಶೈಕ್ಷಣಿಕ ಚಟುವಟಿಕೆಗಳು

| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗಳು | ಆರ್ಥಿಕ ವಿಶ್ಲೇಷಣೆ |
|---|---|---|---|---|---|
| •  ಭಾಷೆ | ಅಕ್ಷರ ತೊಟ್ಟಿಲು ಒಂದನೇ ತರಗತಿಯ ಮಕ್ಕಳಿಗೆ ಪ್ರತಿದಿನ ಎರಡು ಅಕ್ಷರಗಳನ್ನು ಪರಿಚಹಿಸಲು ಪ್ರತ್ಯೇಕ ಚಟುವಟಿಕೆಗಳನ್ನು ನಡೆಸುವುದು .ಕಲಿಕೋಪಕರಣಗಳನ್ನು ತಯಾರಿ | ಅಲ್ಪಾವದಿ ಚಟುವಟಿಕೆ | ತರಗತಿ ಅಧ್ಯಾಪಕರು | ಕ್ಲಾಸ್ ಪಿ.ಟಿ.ಎ | ೧೦೦೦ |
| | ಓದುವ ಸಾಮಾಗ್ರಿಗಳು, 1 ರಿಂದ 4ನೇ ತರಗತಿಯ ಮಕ್ಕಳ ಮಟ್ಟಕ್ಕೆ ಸರಿಯಾದ ಓದುವ ಸಾಮಾಗ್ರಿಗಳನ್ನು ತಯಾರಿಸುವುದು ಮುದ್ರಣ, ದಿನಕೊಂದು ಓದುವ ಕಾರ್ಡ್ ಚಟುವಟಿಕೆಯ ಮೂಲಕ ಓದುವಿಕೆಯಲ್ಲಿ ಮಕ್ಕಳಿಗೆ ಆಸಕ್ತಿ ಮೂಡಿಸುವುದು | ಮಧ್ಯಾವಧಿ ಚಟುವಟಿಕೆ | ಯಸ್.ಆರ್.ಜಿ | ಪಿ.ಟಿ.ಎ | ೧೦೦೦೦ |
| | ಭಾಷಾ ಆಟಗಳು, ದಿನಕ್ಕೊಂದು ಭಾಷಾ ಆಟ ಪ್ರತಿ ತರಗತಿಗಳಲ್ಲಿ. ಭಾಷಾ ಆಟಗಳ ಸಂಗ್ರದ ಶಿಬಿರಗಳನ್ನು ನಡೆಸುವುದು. ತಿಂಗಳಿಗೆರಡು ಬಾಲಸಭೆ | ಮಧ್ಯಾವಧಿ ಚಟುವಟಿಕೆ | ತರಗತಿ ಅಧ್ಯಾಪಕರು | ಪಿ.ಟಿ.ಎ ಅಧ್ಯಾಪಕರು | ೧೦೦೦ |

| | | | | | |
|---|---|---|---|---|---|
| <br>ಭಾಷೆ | ***ಕ್ಲಾಸ್ ಲೈಬ್ರೆರಿ,***<br>ಪ್ರತಿ ತರಗತಿಗಳಿಗೂ ಬೇಕಾಗುವ ಪುಸ್ತಕಗಳ ಪಟ್ಟಿತಯಾರಿ, ಸಂಗ್ರಗ ಮತ್ತು ಖರೀದಿ, ತರಗತಿ ಲೈಬ್ರೆರಿ ಸಜ್ಜೀಕರಿಸುವುದು. ವಾರಕ್ಕೊಂದು ಪುಸ್ತಕ ಓದು  ಓದುವ ಟಿಪ್ಪಣಿ ಹಸ್ತಪತ್ರಿಕೆ ತಯಾರಿ | *ಮಧ್ಯಾವಧಿ ಚಟುವಟಿಕೆ* | *ಪಿ.ಟಿ.ಎ* | *ಮೆನೇಜರ್ ಪಿ.ಟಿ.ಎ ಅಧ್ಯಾಪಕರು* | *೨೦೦೦೦* |
| | ***ಭಾಷಾ ಶಿಬಿರಗಳು***<br>*ಒಗಟುಗಳು,ಗಾದೆ,ಜಾನಪದ ಗೀತೆ ಮಕ್ಕಳ ಹಾಡು  ಕಥೆ ಮೊದಲಾದವುಗಳಿಗೆ ಒತ್ತು ನೀಡಿ ತಿಂಗಳಿಗೆ ಒಂದು ಭಾಷಾ ಶಿಬಿರಗಳನ್ನು ಹಮ್ಮಿಕೊಳ್ಳುವುದು.* | *ದೀರ್ಘಾವಧಿ ಚಟುವಟಿಕೆ* | *ಯಸ್.ಆರ್.ಜಿ* | *ಹಳೆವಿದ್ಯಾರ್ಥಿ ಸಂಘ* | *೧೦೦೦೦* |

# ಅನುಕ್ರಮಣಿಕೆ


| ಕ್ರ.ಸಂ | ವಿಷಯ | ಪುಟ ಸಂ |
|---|---|---|
| 1 | ಮುಖಪುಟ | 1 |
| 2 | ಮುನ್ನುಡಿ | 3 |
| 3 | ಶಾಲೆಯ ದೃಷ್ಟಿಕೋನ | 6 |
| 4 | ಸಾಮಾನ್ಯ ಉದ್ದೇಶಗಳು | 7 |
| 5 | ಕಾರ್ಯಕ್ರಮಗಳ ವಿವರ | 8 |
| 6 | ಶೈಕ್ಷಣಿಕ ಚಟುವಟಿಕೆಗಳು | 9 |
| 7 | ಭೌತಿಕ ಸೌಕರ್ಯಗಳ ವಿವರ | 20 |
| 8 | ಅಲ್ಪಾವಧಿಯಲ್ಲಿ ನಡೆಸಬೇಕಾದ ಚಟುವಟಿಕೆಗಳು | 21 |
| ೯ | ಉಪ ಸಂಹಾರ | 22 |



# ಪರಿಸರ ಅಧ್ಯಯನ ಚಟುವಟಿಕೆಗಳು

| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗಳು | ಆರ್ಥಿಕ ವಿಶ್ಲೇಷಣೆ |
|---|---|---|---|---|---|
| •  ಪರಿಸರ ಅಧ್ಯಯನ | **ದಿನಾಚರಣೆಗಳು** ಪರಿಸರ ದಿನಾಚರಣೆ ,ವನಮಹೋತ್ಸವ, ಯುದ್ಧ ವಿರುದ್ಧ ದಿನ ಮೊದಲಾದವುಗಳನ್ನು ಚಿತ್ರ ಪ್ರದರ್ಶನ ಸೆಮಿನಾರ್ ರಸಪ್ರಶ್ನೆ ಮೊದಲಾದ ಚಟುವಟಿಕೆಗಳೊಂದಿಗೆ ಆಚರಿಸುವುದು | ಅಲ್ಪಾವದಿ ಚಟುವಟಿಕೆ | ತರಗತಿ ಅಧ್ಯಾಪಕರು | ಅಧ್ಯಾಪಕರು | ೫೦೦೦ |
| | **ಲ್ಯಾಬ್ ಚಟುವಟಿಕೆಗಳು,** ಮೂರನೇ ಮತ್ತು ನಾಲ್ಕನೇ ತರಗತಿಯಲ್ಲಿ ಕ್ಲಾಸ್ ಲ್ಯಾಬ್ ಸಜ್ಜೀಕರಣ ಪರಿಸರದಿಂದ ಲಭಿಸುವ ವಸ್ತುಗಳ ಪಟ್ಟಿತಯಾರಿ ಸಂಗ್ರಹ ಸರಳ ಪ್ರಯೋಗ ಪ್ರೋಜೆಕ್ಟ್ ಚಟುವಟಿಕೆಗಳು | ದೀರ್ಘಾವಧಿ ಚಟುವಟಿಕೆ | ಯಸ್.ಆರ್.ಜಿ | ಮೆನೇಜರ್ ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ | ೧೦೦೦೦ |
| | **ವಿಜ್ಞಾನ ಸಂಘ,** ವಿಜ್ಞಾನ ಸಂಘ ರೂಪೀಕರಣ ಸಂಘದ ನೇತೃತ್ವದಲ್ಲಿ ಪಾಠಭಾಗಕ್ಕೆ ಸಂಬಂದಿಸಿದ ವಿವಿಧ ಪ್ರಯೋಗಗಳು ಬಯಲು ಪ್ರವಾಸ ರಸಪ್ರಶ್ನೆ ಮೊದಲಾದ ಚಟುವಟಿಕೆಗಳ ಆಯೋಜನೆ. | ಮಧ್ಯಾವಧಿ ಚಟುವಟಿಕೆ | ಯಸ್.ಆರ್.ಜಿ | ಅಧ್ಯಾಪಕರು | ೨೦೦೦ |
| | **ಸಯನ್ಸ್ ಲೈಬ್ರೆರಿ,** ಮೂರನೇ ಮತ್ತು ನಾಲ್ಕನೇ ತರಗತಿಗಳಿಗೆ ಬೇಕಾಗುವ ಪರಿಸರ ಪುಸ್ತಕಗಳ ಪಟ್ಟಿತಯಾರಿ, ಸಂಗ್ರಗ ಮತ್ತು ಖರೀದಿ, ತರಗತಿ ಲೈಬ್ರೆರಿ ಸಜ್ಜೀಕರಿಸುವುದು. ವಾರಕ್ಕೊಂದು ಪುಸ್ತಕ ಓದು ಓದುವ ಟಿಪ್ಪಣಿ ಹಸ್ತಪತ್ರಿಕೆ ತಯಾರಿ | ಅಲ್ಪಾವದಿ ಚಟುವಟಿಕೆ | ತರಗತಿ ಅಧ್ಯಾಪಕರು | ಮೆನೇಜರ್ ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ | ೧೦೦೦೦ |

| | | | | | |
|---|---|---|---|---|---|
| <br>*ಪರಿಸರ ಅಧ್ಯಯನ* | ***ಜೈವಿಕ ಉದ್ಯಾನ,*** ಶಾಲಾ ಪರಿಸರದಲ್ಲಿ ಜೈವ ವೈವಿಧ್ಯ ಪಾರ್ಕ್ ನಿರ್ಮಾಣ ವಿವಿಧ ವೈವಿಧ್ಯಮಯ ಸಸ್ಯಗಳ ಪಟ್ಟಿ ತಯಾರಿ ಸಂಗ್ರಹ ಖರೀದಿ ವಿವಿಧ ತರದ ಹೂ ಗಿಡಗಳ ಸಂಗ್ರಹ ಶಲಭೋದ್ಯಾನ ನಿರ್ಮಾಣ | ***ಅಲ್ಪಾವದಿ ಚಟುವಟಿಕೆ*** | ***ಮೆನೇಜರ್ ಪಿ.ಟಿ.ಎ*** | ***ಮೆನೇಜರ್ ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ ಪಂಚಾಯತು*** | *೧೦೦೦೦೦* |
| | **ಬಯಲುಪ್ರವಾಸಗಳು,** ಒಂದನೇ ತರಗತಿಯಿಂದ ನಾಲ್ಕನೇ ತರಗತಿಗಳ ವರೆಗಿನ ಪಾಠಭಾಗಗಳಲ್ಲಿ ನಡೆಸಬೇಕಾದ ಬಯಲು ಪ್ರವಾಸಗಳನ್ನು ಕಂಡುಕೊಳ್ಳುವುದು ಯೋಜನೆ ತಯಾರಿ ಮತ್ತು ಸಮಯಕ್ಕೆ ಸರಿಯಾಗಿ ಬಯಲುಪ್ರವಾಸಗಳನ್ನು ನಡೆಸುವುದು. | ***ಮಧ್ಯಾವಧಿ ಚಟುವಟಿಕೆ*** | ***ತರಗತಿ ಅಧ್ಯಾಪಕರು*** | ***ಪಿ.ಟಿ.ಎ ಅಧ್ಯಾಪಕರು*** | *೨೦೦೦೦* |
| | ***ತರಕಾರಿ,ತೋಟ.*** ತರಕಾರಿ ಬೀಜಗಳ ಸಂಗ್ರಹ ಚಟುವಟಿಕೆ ತರಕಾರಿ ತೋಟ ನಿರ್ಮಾಣ ತರಗತಿಗಳಿಗೆ ಎರಡು ತರಕಾರಿ ಕೃಷಿ ಯೋಜನೆ. | ***ದೀರ್ಘಾವಧಿ ಚಟುವಟಿಕೆ*** | | ***ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ*** | *೧೦೦೦೦* |



# ಗಣಿತ ಚಟುವಟಿಕೆಗಳು

| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗಳು | ಆರ್ಥಿಕ ವಿಶ್ಲೇಷಣೆ |
|---|---|---|---|---|---|
| ಗಣಿತ | ಗಣಿತ ಲ್ಯಾಬ್,.<br>ಮೂರನೇ ಮತ್ತು ನಾಲ್ಕನೇ ತರಗತಿಯಲ್ಲಿ ಗಣಿತ ಕ್ಲಾಸ್ ಲ್ಯಾಬ್ ಸಜ್ಜೀಕರಣ ಪರಿಸರದಿಂದ ಲಭಿಸುವ ವಸ್ತುಗಳ ಪಟ್ಟಿತಯಾರಿ ಸಂಗ್ರಹ ನಿರ್ಮಾಣ ಶಿಬಿರಗಳನ್ನು ನಡೆಸುವುದು ಸಜ್ಜೀಕರಣ | ಮಧ್ಯಾವಧಿ ಚಟುವಟಿಕೆ | ತರಗತಿ ಅಧ್ಯಾಪಕರು | ಮೆನೇಜರ್<br>ಪಿ.ಟಿ.ಎ<br>ಅಧ್ಯಾಪಕರು<br>ಹಳೆವಿದ್ಯಾರ್ಥಿ ಸಂಘ<br>ಪಂಚಾಯತು | |
| | ಗಣಿತ ಆಟಗಳು,<br>ದಿನಕ್ಕೊಂದು ಗಣಿತ ಆಟಗಳನ್ನು ಪ್ರತೀ ತರಗತಿಯಲ್ಲಿ ಆಡಿಸುವುದು. ಆಟಗಳ ಸಂಗ್ರಹ ಶಿಬಿರ ಗಣಿತಾಟಗಳ ಪುಸ್ತಕ ಬಿಡುಗಡೆ | ಅಲ್ಪಾವದಿ ಚಟುವಟಿಕೆ | ತರಗತಿ ಅಧ್ಯಾಪಕರು | ಪಿ.ಟಿ.ಎ<br>ಅಧ್ಯಾಪಕರು<br>ಹಳೆವಿದ್ಯಾರ್ಥಿ ಸಂಘ | |
| | ಜಾಣ್ಮೆ ಲೆಕ್ಕ<br>ದಿನಕ್ಕೊಂದು ಗಣಿತ ಜಾಣ್ಮೆಗಳನ್ನು ಪ್ರತೀ ತರಗತಿಯಲ್ಲಿ ನೀಡುವುದು. ಜಾಣ್ಮೆ ಲೆಕ್ಕ ಸಂಗ್ರಹ ಶಿಬಿರ ನಡೆಸುವುದು. | ಅಲ್ಪಾವದಿ ಚಟುವಟಿಕೆ | ತರಗತಿ ಅಧ್ಯಾಪಕರು | ಪಿ.ಟಿ.ಎ<br>ಅಧ್ಯಾಪಕರು<br>ಹಳೆವಿದ್ಯಾರ್ಥಿ ಸಂಘ | |
| | ಗಣಿತ ಮೇಳ,<br>ಪ್ರತಿ ತರಗತಿ ಮಟ್ಟದಲ್ಲೂ , ಶಾಲಾ ಮಟ್ಟದಲ್ಲೂ ಅಣಿತ ಮೇಳ ನಡೆಸುವುದು. | ದೀರ್ಘಾವಧಿ ಚಟುವಟಿಕೆ | ಯಸ್.ಆರ್.ಜಿ | ಪಿ.ಟಿ.ಎ<br>ಅಧ್ಯಾಪಕರು<br>ಹಳೆವಿದ್ಯಾರ್ಥಿ ಸಂಘ | |

| | | | | | |
|---|---|---|---|---|---|
| *ಗಣಿತ* | *, ಬುಲೆಟಿನ್ ಬೋರ್ಡ್,*<br>ಪ್ರತಿ ತರಗತಿಗಳಿಗೂ ಪ್ರತ್ಯೇಕ ಗಣಿತ ಬುಲೆಟಿನ್ ಬೋರ್ಡ್ ಸಜ್ಜೀಕರಣ ಮಕ್ಕಳ ಗಣಿತ ಉತ್ಪನ್ನಗಳ ಪ್ರದರ್ಶನ | *ಮಧ್ಯಾವಧಿ ಚಟುವಟಿಕೆ* | *ಯಸ್.ಆರ್.ಜಿ* | *ಮೆನೇಜರ್ ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ ಪಂಚಾಯತು* | |
| | ಕಲಿಕೋಪಕರಣ<br>ಪ್ರತೀ ತರಗತಿಗಳ ಗಣಿತ ಪಾಠಭಾಗಗಳಿಗೆ ಬೇಕಾಗುವ ಕಲಿಕೋಪಕರಣಗಳ ಪಟ್ಟಿ ತಯಾರಿ ಸಂಗ್ರಹ ನಿರ್ಮಾಣ  ಶಿಭಿರಗಳು ಖರೀದಿ. | *ದೀರ್ಘಾವಧಿ ಚಟುವಟಿಕೆ* | *ಯಸ್.ಆರ್.ಜಿ* | *ಮೆನೇಜರ್ ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ ಪಂಚಾಯತು* | |




| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗಳು | ಆರ್ಥಿಕ ವಿಶ್ಲೇಷಣೆ |
|---|---|---|---|---|---|
| ಇಂಗ್ಲೀಷ್ | ಲ್ಯಾಗ್ವೇಜ್ ಗೇಮ್ಸ್,<br>ದಿನಕ್ಕೊಂದು ಇಂಗ್ಲೀಷ್ ಭಾಷಾ ಆಟಗಳನ್ನು ಪ್ರತೀ ತರಗತಿಯಲ್ಲಿ ಆಡಿಸುವುದು. ಆಟಗಳ ಸಂಗ್ರಹ ಶಿಬಿರ ಇಂಗ್ಲೀಷ್ ಭಾಷಾ ಆಟಗಳ ಪುಸ್ತಕ ಬಿಡುಗಡೆ | ಮಧ್ಯಾವಧಿ ಚಟುವಟಿಕೆ | ತರಗತಿ ಅಧ್ಯಾಪಕರು | ಮೆನೇಜರ್<br>ಪಿ.ಟಿ.ಎ<br>ಅಧ್ಯಾಪಕರು<br>ಹಳೆವಿದ್ಯಾರ್ಥಿ ಸಂಘ<br>ಪಂಚಾಯತು | |
| | ಇಂಗ್ಲೀಷ್ ಕ್ಯಾಂಪ್,<br>ಇಂಗ್ಲೀಷ್ ಹಾಡುಗಳು ಕಥೆ ಲ್ಯಾಗ್ವೇಜ್ ಗೇಮ್ಸ್ ಮೊದಲಾದವುಗಳಿಗೆ ಒತ್ತು ನೀಡಿ ತಿಂಗಳಿಗೆ ಒಂದು ಭಾಷಾ ಶಿಬಿರಗಳನ್ನು ಹಮ್ಮಿಕೊಳ್ಳುವುದು. | ಮಧ್ಯಾವಧಿ ಚಟುವಟಿಕೆ | ಯಸ್.ಆರ್.ಜಿ | ಮೆನೇಜರ್<br>ಪಿ.ಟಿ.ಎ<br>ಅಧ್ಯಾಪಕರು<br>ಹಳೆವಿದ್ಯಾರ್ಥಿ ಸಂಘ<br>ಪಂಚಾಯತು | |
| | ಇಂಗ್ಲೀಷ್ ರೀಡಿಂಗ್ ಕಾರ್ಡ್,<br>ಪ್ರತಿ ತರಗತಿಗಳಲ್ಲಿಯೂ ಇಂಗ್ಲೀಷ್ ರೀಡಿಂಗ್ ಕಾರ್ಡ್ ಗಳ ತಯಾರಿ ಮುದ್ರಣ ಮತ್ತು ಬಳಕೆಗೆ ಒತ್ತು ನೀಡುವುದು. | ಅಲ್ಪಾವದಿ ಚಟುವಟಿಕೆ | ಯಸ್.ಆರ್.ಜಿ | ಮೆನೇಜರ್<br>ಪಿ.ಟಿ.ಎ<br>ಅಧ್ಯಾಪಕರು<br>ಹಳೆವಿದ್ಯಾರ್ಥಿ ಸಂಘ<br>ಪಂಚಾಯತು | |

| | | | | | |
|---|---|---|---|---|---|
| | ***ಇಂಗ್ಲೀಷ್ ಲೈಬ್ರೆರಿ***<br>ಪ್ರತಿ ತರಗತಿಗಳಿಗೂ ಬೇಕಾಗುವ ಇಂಗ್ಲೀಷ್ ಪುಸ್ತಕಗಳ ಪಟ್ಟಿತಯಾರಿ, ಸಂಗ್ರಗ ಮತ್ತು ಖರೀದಿ, ತರಗತಿ ಲೈಬ್ರೆರಿ ಸಜ್ಜೀಕರಿಸುವುದು. ವಾರಕ್ಕೊಂದು ಪುಸ್ತಕ ಓದು ಓದುವ ಟಿಪ್ಪಣಿ ಹಸ್ತಪತ್ರಿಕೆ ತಯಾರಿ | ***ದೀರ್ಘಾವಧಿ ಚಟುವಟಿಕೆ*** | ***ಪಿ.ಟಿ.ಎ*** | ***ಮೆನೇಜರ್<br>ಪಿ.ಟಿ.ಎ<br>ಅಧ್ಯಾಪಕರು<br>ಹಳೆವಿದ್ಯಾರ್ಥಿ ಸಂಘ<br>ಪಂಚಾಯತು*** | |
| | ***ಸ್ಪೀಕ್ ಇಂಗ್ಲೀಷ್***<br>*ಪ್ರತಿ ಮಕ್ಕಳೂ ಇಂಗ್ಲೀಷ್ ನಲ್ಲಿ ಮಾತನಾಡುವಂತೆ ಪ್ರೇರೇಪಿಸಲು ಸ್ಪೀಕ್ ಇಂಗ್ಲೀಷ್ ಯೋಜನೆ ತರಭೇತಿ ಚಟುವಟಿಕೆ ಪ್ರಥಮ ದಿನ ಇಂಗ್ಲೀಷ್ ದಿನ ಇಂಗ್ಲೀಷ್ ಪೆಸ್ಟ್ ನಡೆಸುವುದು* | ***ಅಲ್ಪಾವದಿ ಚಟುವಟಿಕೆ*** | ***ಯಸ್.ಆರ್.ಜಿ*** | ***ಮೆನೇಜರ್<br>ಪಿ.ಟಿ.ಎ<br>ಹಳೆವಿದ್ಯಾರ್ಥಿ ಸಂಘ<br>ಪಂಚಾಯತು*** | |



# ಕಲಾ ಶಿಕ್ಷಣ

| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗಳು | ಆರ್ಥಿಕ ವಿಶ್ಲೇಷಣೆ |
|---|---|---|---|---|---|
| ಕಲಾ ಶಿಕ್ಷಣ | ಬಾಲ ಸಭೆ, ಜೂನ್ ತಿಂಗಳಲ್ಲಿ ಟ್ಯಾಲೆಂಟ್ ಸರ್ಚ್ ಚಟುವಟಿಕೆ ಬಾಲಸಭೆ ರೂಪೀಕರಣ ತಿಂಗಳಿಗೆ ಎರಡು ಬಾಲಸಬೆ | ಅಲ್ಪಾವದಿ ಚಟುವಟಿಕೆ | ಯಸ್.ಆರ್.ಜಿ | ಅಧ್ಯಾಪಕರು | |
| | ಚಿತ್ರ ರಚನೆ, ಚಿತ್ರ ರಚನೆಯಲ್ಲಿ ಆಸಕ್ತ ಮಕ್ಕಳನ್ನು ಗುರುತಿಸುವುದು. ಪ್ರತೇಕ ಅಧ್ಯಾಪಕರ ನೇಮಕ ಮತ್ತು ತರಬೇತಿ ಶಿಬಿರಗಳನ್ನು ನಡೆಸುವುದು | ಮಧ್ಯಾವಧಿ ಚಟುವಟಿಕೆ | ಯಸ್.ಆರ್.ಜಿ | ಮೆನೇಜರ್<br>ಪಿ.ಟಿ.ಎ<br>ಹಳೆವಿದ್ಯಾರ್ಥಿ ಸಂಘ<br>ಪಂಚಾಯತು | |
| | ನಾಟ್ಯ ತರಬೇತಿ, ನಾಟ್ಯದಲ್ಲಿ ಆಸಕ್ತ ಮಕ್ಕಳನ್ನು ಗುರುತಿಸುವುದು. ಪ್ರತೇಕ ಅಧ್ಯಾಪಕರ ನೇಮಕ ಮತ್ತು ತರಬೇತಿ ನೀಡುವುದು | ದೀರ್ಘಾವಧಿ ಚಟುವಟಿಕೆ | ಪಿ.ಟಿ.ಎ | ಮೆನೇಜರ್<br>ಪಿ.ಟಿ.ಎ<br>ಹಳೆವಿದ್ಯಾರ್ಥಿ ಸಂಘ | |
| | ಸಂಗೀತ, ಸಂಗೀತದಲ್ಲಿ ಆಸಕ್ತ ಮಕ್ಕಳನ್ನು ಗುರುತಿಸುವುದು. ಪ್ರತೇಕ ಅಧ್ಯಾಪಕರ ನೇಮಕ ಮತ್ತು ತರಬೇತಿ ನೀಡುವುದು | ದೀರ್ಘಾವಧಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ<br>ಹಳೆವಿದ್ಯಾರ್ಥಿ ಸಂಘ | |
| | ನಾಟಕ, ನಾಟಕ ತರಭೇತಿ ಶಿಬಿರಗಳನ್ನು ನಡೆಸುವುದು ನಾಟಕ ಪ್ರದರ್ಶನ ನಾಟಕೋತ್ಸವಗಳನ್ನು ನಡೆಸುವುದು | ಮಧ್ಯಾವಧಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ<br>ಹಳೆವಿದ್ಯಾರ್ಥಿ ಸಂಘ | |

# ದೈಹಿಕ ,ಆರೋಗ್ಯ ಶಿಕ್ಷಣ

| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗಳು | ಆರ್ಥಿಕ ವಿಶ್ಲೇಷಣೆ |
|---|---|---|---|---|---|
| ದೈಹಿಕ ,ಆರೋಗ್ಯ ಶಿಕ್ಷಣ | ಕ್ರೀಡಾ ತರಬೇತಿಗಳು, ಕ್ರೀಡಾ ಪಟುಗಳ ಆಯ್ಕೆ ಶಿಬಿರ ನಡೆಸುವುದು ಆಯ್ಕೆಯಾದ ಕ್ರೀಡಾ ಪಟುಗಳಿಗೆ ಪ್ರತ್ಯೇಕ ಕ್ರೀಡಾತರಬೇತಿ ನೀಡುವುದು. | ಮಧ್ಯಾವಧಿ ಚಟುವಟಿಕೆ | ಯಸ್.ಆರ್.ಜಿ | ಪಿ.ಟಿ.ಎ ಹಳೆವಿದ್ಯಾರ್ಥಿ ಸಂಘ ಸಂಸ್ಥೆಗಳು | |
| | ಯೋಗ, ಯೋಗದಲ್ಲಿ ಆಸಕ್ತ ಮಕ್ಕಳನ್ನು ಗುರುತಿಸುವುದು. ಪ್ರತೇಕ ಅಧ್ಯಾಪಕರ ನೇಮಕ ಮತ್ತು ತರಬೇತಿ ನೀಡುವುದು ಯೋಗಪ್ರದರ್ಶನ ಹಮ್ಮಿಕೊಳ್ಳುವುದು. | ಅಲ್ಪಾವದಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ ಹಳೆವಿದ್ಯಾರ್ಥಿ ಸಂಘ ಸಂಸ್ಥೆಗಳು | |
| | ,ವ್ಯಾಯಾಮ, ವಾರದಲ್ಲಿ ಎರಡು ದಿನ ತರಗತಿಗಳಲ್ಲಿ ಸರಳ ವ್ಯಾಯಾಮಕ್ಕೆ ಒತ್ತು ನೀಡುವುದು.ಮಾಸ್ ಡ್ರಿಲ್ ನಡೆಸುವುದು | ಅಲ್ಪಾವದಿ ಚಟುವಟಿಕೆ | ಯಸ್.ಆರ್.ಜಿ | ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ | |
| | ಆಟೋಟ ಕೋರ್ಟ್, ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಕೊಕ್ಕೋ, ಶಟಲ್ ಕೊಕ್ , ಕಬ್ಬಡಿ , ಕೋರ್ಟ್ ಗಳ ನಿರ್ಮಾಣ ಮತ್ತು ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳುವುದು. | ದೀರ್ಘಾವಧಿ ಚಟುವಟಿಕೆ | ಪಿ.ಟಿ.ಎ ಹಳೆವಿದ್ಯಾರ್ಥಿ ಸಂಘ ಸಂಸ್ಥೆಗಳು | ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ | |
| | ಆರೋಗ್ಯ ಮಾಹಿತಿ ಶಿಬಿರ, ರಕ್ಷಕರಿಗೆ ವಿದ್ಯಾರ್ಥಿಗಳಿಗೆ ಆರೋಗ್ಯ ಮಾಹಿತಿ ಶಿಬಿರಗಳನ್ನು ನಡೆಸುವುದು | ಮಧ್ಯಾವಧಿ ಚಟುವಟಿಕೆ | ಯಸ್.ಆರ್.ಜಿ | ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ | |




# ವೃತ್ತಿ ಪರಿಚಯ

| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗಳು | ಆರ್ಥಿಕ ವಿಶ್ಲೇಷಣೆ |
|---|---|---|---|---|---|
| ವೃತ್ತಿ ಪರಿಚಯ | ಕಸದಿಂದ ರಸ, ತರಬೇತಿ , ಉಪಯೋಗ ಶೂನ್ಯ ವಸ್ತು ಗಳಿಂದ ಕಲಿಕೋಪಕರಣ ತಯಾರಿ ಕಾರ್ಯಗಾರ ನಡೆಸುವುದು. ತರಬೇತಿ ನೀಡುವುದು. | ಮಧ್ಯಾವಧಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ ಹಳೆವಿದ್ಯಾರ್ಥಿ ಸಂಘ ಸಂಸ್ಥೆಗಳು | |
| | ವೃತ್ತಿಪರಿಚಯ ಮೇಳ, ನಿರ್ಮಾಣ ಚಟುವಟಿಕೆಗಳಲ್ಲಿ ಆಸಕ್ತರನ್ನು ಪ್ರತಿ ತರಗತಿಗಳಲ್ಲಿ ಗುರುತಿಸುವುದು ವೃತ್ತಿ ಪರಿಚಯ ಸಂಘ ರೂಪೀಕರಣ ತರಬೇತಿ ನೀಡುವುದು ವೃತ್ತಿಪರಿಚಯ ಮೇಳ ನಡೆಸುವುದು | ಅಲ್ಪಾವದಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ ಹಳೆವಿದ್ಯಾರ್ಥಿ ಸಂಘ ಸಂಸ್ಥೆಗಳು | |
| | ಪ್ರದರ್ಶನ , ಮಕ್ಕಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆ | ದೀರ್ಘಾವಧಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ ಹಳೆವಿದ್ಯಾರ್ಥಿ | |



# ಐ.ಟಿ ಶಿಕ್ಷಣ

| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗಳು |
|---|---|---|---|---|
| ಐ.ಟಿ ಶಿಕ್ಷಣ | ಸ್ಲೈಡ್ ನಿರ್ಮಾಣ, ಪ್ರತಿ ತರಗತಿಗಳಿಗೂ ಬೇಕಾಗುವ ಪಾಠ ಭಾಗಗಳಿಗೆ ಸಂಬಂದಿಸಿದ ಐ.ಟಿ ಆಧರಿತ ಕಲಿಕೋಪಕರಣಗಳ ಪಟ್ಟಿ ತಯಾರಿ ಚಿತ್ರಗಳ ಸಂಗ್ರಹ ಸ್ಲೈಡ್ ನಿರ್ಮಾಣ ಕಾರ್ಯಗಾರ ನಡೆಸುವುದು | ಮಧ್ಯಾವಧಿ ಚಟುವಟಿಕೆ | ತರಗತಿ ಅಧ್ಯಾಪಕರು | ಪಿ.ಟಿ.ಎ ಹಳೆವಿದ್ಯಾರ್ಥಿ ಸಂಘ ಸಂಸ್ಥೆಗಳು |
| | ಡಿಜಿಟಲ್ ಟೆಸ್ಟ್ ತಯಾರಿ, ಪ್ರತಿ ತರಗತಿಗಳಿಗೆ ಬೇಕಾದ ಡಿಜಿಟಲ್ ಟೆಸ್ಟ್ ತಯಾರಿ ಶಿಬಿರ ನಡೆಸುವುದು ತರಗತಿಗಳಲ್ಲಿ ಡಿಜಿಟಲ್ ಪ್ರಾಠ ಭಾಗಗಳ ಬಳಕೆ | ಮಧ್ಯಾವಧಿ ಚಟುವಟಿಕೆ | ತರಗತಿ ಅಧ್ಯಾಪಕರು | ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ |
| | ಐ.ಟಿ.ಲ್ಯಾಬ್, ಶಾಲೆಗೆ ಪ್ರತ್ಯೇಕ ಐ.ಟಿ.ಲ್ಯಾಬ್ ನಿರ್ಮಾಣ ಐ.ಟಿ ಕಲಿಕೆಗೆ ಪ್ರತ್ಯೇಕ ಅಧ್ಯಾಪಕರ ನೇಮಕ | ದೀರ್ಘಾವಧಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ |

| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗಳು |
|---|---|---|---|---|
| ಪರಿಸರ ಶುಚಿತ್ವ ವ್ಯಕ್ತಿ ಶುಚಿತ್ವ | ಸ್ವಚ್ಚ ಸುಂದರ ಶಾಲೆ, <u>ಪ್ಲಾಸ್ಟಿಕ್ ಮುಕ್ತ ಶಾಲಾ ಪರಿಸರ</u> ಶಾಲೆಯ ಆವರಣ ಪ್ಲಾಸ್ಟಿಕ್ ಮುಕ್ತಗೋಳಿಸುವುದು. ಕಂಪೋಸ್ಟ್ ಹೊಂಡಗಳ ತಯಾರಿ. ಪ್ಲಾಸ್ಟಿಕ್ ದುಷ್ಪರಿಣಾಮದ ಬಗ್ಗೆ ಮಕ್ಕಲಲ್ಲಿ ಅರಿವುಮೂಡಿಸುವ ವಿವಿದ ಚಟುವಟಿಕೆಗಳು. | ಮಧ್ಯಾವಧಿ ಚಟುವಟಿಕೆ | ಪಿ.ಟಿ.ಎ ಪಿ.ಟಿ.ಎ ಹಳೆವಿದ್ಯಾರ್ಥಿ ಸಂಘ ಸಂಸ್ಥೆಗಳು | ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ |
| | ನಿರ್ಮಲ ವಿದ್ಯಾಲಯ ಶಾಲಾ ಪರಿಸರದಲ್ಲಿ ಬೇಗನೆ ಬೆಳೆಯುವ ಗಿಡಗಳನ್ನು ನೆಟ್ಟುಬೆಳೆಸಿ ಸಂರಕ್ಷಿಸುವುದು | ದೀರ್ಘಾವಧಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ ಅಧ್ಯಾಪಕರು ಹಳೆವಿದ್ಯಾರ್ಥಿ ಸಂಘ |



#135343568

# ಅರಬಿಕ್ ಶಿಕ್ಷಣ

| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗಳು |
|---|---|---|---|---|
| ಅರಬಿಕ್ ಶಿಕ್ಷಣ | ಅರಬಿಕ್ ಲೈಬ್ರೆರಿ<br>ಪ್ರತಿ ತರಗತಿಗಳಿಗೂ ಬೇಕಾಗುವ ಅರಬಿಕ್ ಪುಸ್ತಕಗಳ ಪಟ್ಟಿತಯಾರಿ, ಸಂಗ್ರಗ ಮತ್ತು ಖರೀದಿ, ತರಗತಿ ಲೈಬ್ರೆರಿ ಸಜ್ಜೀಕರಿಸುವುದು. ವಾರಕ್ಕೊಂದು ಪುಸ್ತಕ ಓದು ಓದುವ ಟಿಪ್ಪಣಿ ಹಸ್ತಪತ್ರಿಕೆ ತಯಾರಿ | ಮಧ್ಯಾವಧಿ ಚಟುವಟಿಕೆ | ತರಗತಿ ಅಧ್ಯಾಪಕರು | ಪಿ.ಟಿ.ಎ<br>ಹಳೆವಿದ್ಯಾರ್ಥಿ ಸಂಘ ಸಂಸ್ಥೆಗಳು |
| | ಅರಬಿಕ್ ಪೆಸ್ಟ್ ನಡೆಸುವುದು ಬುಲೆಟಿನ್ ಬೋರ್ಡ್, ಪ್ರತಿ ತರಗತಿಗಳಿಗೂ ಪ್ರತ್ಯೇಕ ಗಣಿತ ಬುಲೆಟಿನ್ ಬೋರ್ಡ್ ಸಜ್ಜೀಕರಣ ಮಕ್ಕಳ ಗಣಿತ ಉತ್ಪನ್ನಗಳ ಪ್ರದರ್ಶನ | ಮಧ್ಯಾವಧಿ ಚಟುವಟಿಕೆ | ತರಗತಿ ಅಧ್ಯಾಪಕರು | ಪಿ.ಟಿ.ಎ<br>ಅಧ್ಯಾಪಕರು<br>ಹಳೆವಿದ್ಯಾರ್ಥಿ ಸಂಘ |
| | ಅರಬಿಕ್ ಕ್ಲಬ್ ರೂಪೀಕರಣ ಹಸ್ತ ಪತ್ರಿಕೆ ಬಿಡುಗಡೆ | ದೀರ್ಘಾವಧಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ<br>ಅಧ್ಯಾಪಕರು<br>ಹಳೆವಿದ್ಯಾರ್ಥಿ ಸಂಘ |

ಭೌತಿಕ ಸೌಕರ್ಯಗಳ ವಿವರ

| ಮಂಡಲ | ಚಟುವಟಿಕೆಗಳು | ಸಮಯ | ಜವಾಬ್ದಾರಿ | ಸಂಪನ್ಮೂಲಗ ಳು | ಆರ್ಥಿಕ ವಿಶ್ಲೇಷಣೆ |
|---|---|---|---|---|---|
| ಶಾಲಾ ಆವರಣ ಗೋಡೆ , ಪ್ರವೇಶ ದ್ವಾರ ನಿರ್ಮಾಣ | ರಸ್ತೆಯ ಬದಿಯಲ್ಲಿರುವ ಶಾಲೆ ವಿದ್ಯಾರ್ಥಿಗಳ ಹಾಗೂ ಶಾಲೆಯ ಭದ್ರತೆಗಾಗಿ ಆವರಣಗೋಡೆ ಮತ್ತು ಆಕರ್ಷಕ ಪ್ರವೇಶ ದ್ವಾರ ನಿರ್ಮಿಸುವುದು. | ಮಧ್ಯಾವಧಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ ಹಳೆವಿದ್ಯಾರ್ಥಿ ಸಂಘ ಸಂಸ್ಥೆಗಳು | 200000 |
| ಅಡುಗೆಕೋಣೆ ಭೋಜನಶಾಲೆ ನಿರ್ಮಾಣ | ಅತ್ಯಾಧುನಿಕ ಸೌಕರ್ಯಗಳಿರುವ ಅಡುಗೆ ಕೋಣೆ ನಿರ್ಮಾಣ ಭೋಜನ ಶಾಲೆ ನಿರ್ಮಿಸುವುದು | ದೀರ್ಘಾವಧಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ ಹಳೆವಿದ್ಯಾರ್ಥಿ ಸಂಘ ಸಂಸ್ಥೆಗಳು | 20000 |
| ಶಾಲೆಗೆ ಪ್ರತ್ಯೇಕ ಐ.ಟಿ.ಲ್ಯಾಬ್ ನಿರ್ಮಾಣ | ಶಾಲೆಗೆ ಪ್ರತ್ಯೇಕ ಐ.ಟಿ.ಲ್ಯಾಬ್ ನಿರ್ಮಾಣ ಐ ಟೆಕ್ ತರಗತಿ ಕೋಣೆ | ದೀರ್ಘಾವಧಿ ಚಟುವಟಿಕೆ | ಪಿ.ಟಿ.ಎ | ಪಿ.ಟಿ.ಎ ಹಳೆವಿದ್ಯಾರ್ಥಿ | 200000 |
| ಹಸಿರು ವಿದ್ಯಾಲಯ | ಶಾಲೆಯ ಆವರಣ ಪ್ಲಾಸ್ಟಿಕ್ ಮುಕ್ತಗೊಳಿಸುವುದು. ಕಂಪೋಸ್ಟ್ ಹೊಂಡಗಳ ತಯಾರಿ. ಮಕ್ಕಳಿಗೆ ಅನುಯೋಜ್ಯವಾದ ಹಸಿರು ಪಾರ್ಕ್ ನಿರ್ಮಣ | ಮಧ್ಯಾವಧಿ ಚಟುವಟಿಕೆ | ಮೆನೇಜರ್ | ಮೆನೇಜರ್ ಪಿ.ಟಿ.ಎ | 200000 |
| ಮಕ್ಕಳ ಉದ್ಯಾವನ | ಶಾಲಾ ಪರಿಸರದಲ್ಲಿ ಹೂದೋಟ ನಿರ್ಮಿಸುವುದು ಮತ್ತು ಮಕ್ಕಳ ಹುಟ್ಟುಹಬ್ಬ ಹೂ ತೋಟ ನಿರ್ಮಾಣ ಉಯ್ಯಾಲೆ ಜಾರುಬಂಡಿ ತಿರುಗು ಬಂಡಿ ಸೀಸೋ ಮೊದಲಾದವುಗಳ ನಿರ್ಮಾಣನೀರಿನ ಕಾರಂಜಿ ನಿರ್ಮಾಣ | ಮಧ್ಯಾವಧಿ ಚಟುವಟಿಕೆ | ಮೆನೇಜರ್ | ಹಳೆವಿದ್ಯಾರ್ಥಿ ಸಂಘ | 300000 |
| ಶಾಲಾಕಟ್ಟಡ ಬಯಲು ರಂಗಮಂದಿರ ನಿರ್ಮಾಣ | ನೂತನ ೪ ತರಗತಿ ಕೋಣೆಗಳ ನಿರ್ಮಾಣ. ಶಾಲೆಯ ಮುಂಭಾಗದಲ್ಲಿ ಶಾಲೆಯ ಶತಮಾನೋತ್ತರ ಬೆಳ್ಳಿಹಬ್ಬದ ಸ್ಮಾರಕ ಬಯಲು ರಂಗಮಂದಿರ ನಿರ್ಮಾಣಸಭಾ ಭವನ ನಿರ್ಮಾಣ | ದೀರ್ಘಾವಧಿ ಚಟುವಟಿಕೆ | ಮೆನೇಜರ್ | ಮೆನೇಜರ್ ಪಿ.ಟಿ.ಎ | 1000000 |

# ಅಲ್ಪಾವಧಿಯಲ್ಲಿ ನಡೆಸಬೇಕಾದ ಚಟುವಟಿಕೆಗಳ ವಿವರಗಳು

| ಕ್ರ.ಸಂ | ವಿಷಯ | ಚಟುವಟಿಕೆಗಳು |
|---|---|---|
| | ಭಾಷೆ | ತರಗತಿಯ ಮಕ್ಕಳಿಗೆ ಪ್ರತಿದಿನ ಎರಡು ಅಕ್ಷರಗಳನ್ನು ಪರಿಚಹಿಸಲು ಪ್ರತ್ಯೇಕ ಚಟುವಟಿಕೆಗಳನ್ನು ನಡೆಸುವುದು .ಕಲಿಕೋಪಕರಣಗಳನ್ನು ತಯಾರಿ. ಜೂನ್ ತಿಂಗಳಿನಿಂದ ಪ್ರತಿದಿನ ಅಸಂಬ್ಲಿಯಲ್ಲಿ ಅಕ್ಷರ ಪರಿಚಯ. ಅಕ್ಷರಕ್ಕೆ ಸಂಬಂದಿಸಿದ ಪದಗಳ ಸಂಗ್ರಹ ಪದಕೋಶ ತಯಾರಿ. ದಿನಕೊಂದು ಓದುವ ಕಾರ್ಡ್ ಚಟುವಟಿಕೆಯ ಮೂಲಕ ಓದುವಿಕೆಯಲ್ಲಿ ಮಕ್ಕಳಿಗೆ ಆಸಕ್ತಿ ಮೂಡಿಸುವುದು |
| | ಪರಿಸರ ಅಧ್ಯಯನ | ಶಾಲಾ ಪರಿಸರದಲ್ಲಿ ಜೈವ ವೈವಿಧ್ಯ ಪಾರ್ಕ್ ನಿರ್ಮಾಣ ವಿವಿಧ ವೈವಿಧ್ಯಮಯ ಸಸ್ಯಗಳ ಪಟ್ಟಿ ತಯಾರಿ ಸಂಗ್ರಹ ಖರೀದಿ  ವಿವಿಧ ತರದ ಹೂ ಗಿಡಗಳ ಸಂಗ್ರಹ ಶಲಭೋದ್ಯಾನ ನಿರ್ಮಾಣ ವಿಜ್ಞಾನ ಸಂಘ ರೂಪೀಕರಣ  ಸಂಘದ ನೇತೃತ್ವದಲ್ಲಿ ಪಾಠಭಾಗಕ್ಕೆ ಸಂಬಂದಿಸಿದ ವಿವಿಧ ಪ್ರಯೋಗಗಳು ಬಯಲು ಪ್ರವಾಸ ರಸಪ್ರಶ್ನೆ ಮೊದಲಾದ ಚಟುವಟಿಕೆಗಳ ಆಯೋಜನೆ.<br>ಮೂರನೇ ಮತ್ತು ನಾಲ್ಕನೇ ತರಗತಿಗಳಿಗೆ ಬೇಕಾಗುವ  ಪರಿಸರ ಪುಸ್ತಕಗಳ ಪಟ್ಟಿತಯಾರಿ, ಸಂಗ್ರಗ ಮತ್ತು ಖರೀದಿ, ತರಗತಿ ಲೈಬ್ರೆರಿ ಸಜ್ಜೀಕರಿಸುವುದು. ವಾರಕ್ಕೊಂದು ಪುಸ್ತಕ ಓದು  ಓದುವ ಟಿಪ್ಪಣಿ ಹಸ್ತಪತ್ರಿಕೆ ತಯಾರಿ |
| | ಗಣಿತ | ದಿನಕ್ಕೊಂದು ಗಣಿತ ಆಟಗಳನ್ನು ಪ್ರತೀ ತರಗತಿಯಲ್ಲಿ ಆಡಿಸುವುದು. ಆಟಗಳ ಸಂಗ್ರಹ ಶಿಬಿರ ಗಣಿತಾಟಗಳ ಪುಸ್ತಕ ಬಿಡುಗಡೆ<br>ದಿನಕ್ಕೊಂದು ಗಣಿತ ಜಾಣ್ಮೆಗಳನ್ನು ಪ್ರತೀ ತರಗತಿಯಲ್ಲಿ ನೀಡುವುದು. ಜಾಣ್ಮೆ ಲೆಕ್ಕ  ಸಂಗ್ರಹ ಶಿಬಿರ ನಡೆಸುವುದು |
| | ಇಂಗ್ಲೀಷ್ | ದಿನಕ್ಕೊಂದು ಇಂಗ್ಲೀಷ್ ಭಾಷಾ ಆಟಗಳನ್ನು ಪ್ರತೀ ತರಗತಿಯಲ್ಲಿ ಆಡಿಸುವುದು. ಆಟಗಳ ಸಂಗ್ರಹ ಶಿಬಿರ ಇಂಗ್ಲೀಷ್ ಭಾಷಾ ಆಟಗಳ ಪುಸ್ತಕ ಬಿಡುಗಡೆ<br>ಪ್ರತಿ ತರಗತಿಗಳಲ್ಲಿಯೂ ಇಂಗ್ಲೀಷ್ ರೀಡಿಂಗ್ ಕಾರ್ಡ್ ಗಳ ತಯಾರಿ<br>ಪ್ರಥಮ ದಿನ ಇಂಗ್ಲೀಷ್ ದಿನ   ಯೋಜನೆ ತಯಾರಿ |
| | ಕಲಾ ಶಿಕ್ಷಣ | ಸಂಗೀತದಲ್ಲಿ ಆಸಕ್ತ ಮಕ್ಕಳನ್ನು ಗುರುತಿಸುವುದು. ಪ್ರತೇಕ ಅಧ್ಯಾಪಕರ ನೇಮಕ ಮತ್ತು ತರಬೇತಿ ನೀಡುವುದು<br>ನಾಟ್ಯದಲ್ಲಿ ಆಸಕ್ತ ಮಕ್ಕಳನ್ನು ಗುರುತಿಸುವುದು. ಪ್ರತೇಕ ಅಧ್ಯಾಪಕರ ನೇಮಕ ಮತ್ತು ತರಬೇತಿ ನೀಡುವುದು |
| | ವೃತ್ತಿ ಪರಿಚಯ | ನಿರ್ಮಾಣ ಚಟುವಟಿಕೆಗಳಲ್ಲಿ ಆಸಕ್ತರನ್ನು ಪ್ರತಿ ತರಗತಿಗಳಲ್ಲಿ ಗುರುತಿಸುವುದು ವೃತ್ತಿ ಪರಿಚಯ ಸಂಘ ರೂಪೀಕರಣ |



## ಉಪ ಸಂಹಾರ

ಯಶಸ್ವಿಯ ಮೆಟ್ಟಲು ಗಳನ್ನೇರಲು ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕು .ನಮ್ಮ ಪ್ರತಿಯೊಂದು ಯೋಜನಾಭರಿತವಾದ ಹೆಜ್ಜೆಯೂ ನಮ್ಮ ಸಾಧನೆಯ ಮೆಟ್ಟಲುಗಳನ್ನು ಹತ್ತಲು ಸಹಕಾರಿಯಾಗಬಹುದು. ಸಾರ್ವಜನಿಕ ವಿದ್ಯಾಭ್ಯಾಸ ಸಂರಕ್ಷಣಾ ಯಜ್ಞದ ಅಂಗವಾಗಿ ಕಳೆದ ವರ್ಷ ಶಾಲೆಯ ಭೌತಿಕ ಗುಣಮಟ್ಟವನ್ನು ಹೆಚ್ಚಿಸಲು ತಯಾರಿಸಿದ ಶಾಲಾಭಿವೃದ್ಧಿ ಯೋಜನೆ ನಮ್ಮ ಮುಂದಿದೆ . ಅದರ ಕಾರ್ಯ ಚಟುವಟಿಕೆಗಳೊಂದಿಗೆ ನಮ್ಮ ಶಾಲೆ ಶೈಕ್ಷಣಿಕವಾಗಿ ಹಿರಿಮೆಯ ತಾಣವಾಗಬೇಕು. ಅದಕ್ಕಾಗಿ ಸಾಧನೆಯ ಮೆಟ್ಟಿಲು ಈ ಶೈಕ್ಷಣಿಕ ಕಾರ್ಯ ಯೋಜನೆಯನ್ನು ನಿಮ್ಮ ಮುಂದಿಡುತ್ತೇವೆ. ಶಾಲೆಯ ಸರ್ವತೋಮುಖ ಅಭಿವೃದ್ಧಿಯಲ್ಲಿ ಶಾಲಾ ಅಧ್ಯಾಪಕ ವೃಂದ್ಧ ಪಿ.ಟಿ.ಎ. ಶಾಲಾಭಿವೃದ್ಧಿ ಸಂಘ , ಸಂಘ ಸಂಸ್ಥೆಗಳ ಸಹಭಾಗಿತವವಿದ್ದರೆ , ಈ ಶೈಕ್ಷಣಿಕ ಯೋಜನೆಯು ನಮಗೆ ಸಾಧನೆಯ ಮೆಟ್ಟಲೇರಲು ದಾರಿದೀಪವಾಗಲೆಂದು ಆಶಿಸುತ್ತೇವೆ.






Thank You!